ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

KARNATAKA ELECTRICITY REGULATORY COMMISSION

6 ಮತ್ತು 7ನೇ ಮಹಡಿ, ಮಹಾಲಕ್ಷ್ಮಿ ಛೇಂಬರ್ಸ್
ನಂ. 9/2, ಎಂ.ಜಿ. ರಸ್ತೆ, ಬೆಂಗಳೂರು - 560 001

6th & 7th Floor, Mahalaxmi Chambers
No. 9/2, M.G. Road, Bengaluru - 560 001

ಸಂಖ್ಯೆ:ಕವಿನಿಆ/ಎನ್/38/2016/ 2375

ದಿನಾಂಕ: 10.01.2017

## ಸಾರ್ವಜನಿಕ ವಿಚಾರಣಾ ಪ್ರಕಟಣೆ

*ಪ್ರಕರಣ ಸಂಖ್ಯೆ: ಓಪಿ 29/2016*

*[ಏರ್‌ಸಿಂಕ್ ಎನರ್ಜಿ ಪ್ರೈ.ಲಿ. . . . . ಅರ್ಜಿದಾರರು*

*ಮತ್ತು*

*ಕರ್ನಾಟಕ ಪವರ್ ಕಂಪನಿ ನಿಯಮಿತ ಮತ್ತು ಇತರರು . . . . . . . . ಪ್ರತಿವಾದಿಗಳು]*

ಮೇಲ್ಕಾಣಿಸಿದ ಅರ್ಜಿದಾರರು ತಮ್ಮ ವಾಯು / ಸೌರಶಕ್ತಿ ಮತ್ತು ಸ್ಟೋರೇಜ್ ಬ್ಯಾಟರಿಗಳ ಸಮ್ಮಿಶ್ರ ತಂತ್ರಜ್ಞಾನ ಬಳಸುವ ಘಟಕದಿಂದ ಉತ್ಪಾದಿಸಿ, ಕರ್ನಾಟಕದ ವಿದ್ಯುತ್ ವಿತರಣಾ ಕಂಪೆನಿಗಳಿಗೆ ಮಾರಾಟ ಮಾಡುವ ವಿದ್ಯುಚ್ಛಕ್ತಿಗೆ ದರ ನಿರ್ಧರಣೆಗಾಗಿ ಓಪಿ ಸಂಖ್ಯೆ 29/2016 ಎಂದು ದಾಖಲಾಗಿರುವ ಅರ್ಜಿಯನ್ನು ಆಯೋಗದ ಮುಂದೆ ಸಲ್ಲಿಸಿದ್ದಾರೆ.

ಸದರಿ ಅರ್ಜಿಯಲ್ಲಿ ಅರ್ಜಿದಾರರು ಪ್ರತಿ ಯೂನಿಟ್‌ಗೆ 20 ವರ್ಷಗಳ ಅವಧಿಗೆ ರೂ.11.74ರ ದರವನ್ನು ಕೋರಿರುತ್ತಾರೆ.

ಸದರಿ ಅರ್ಜಿ ಮತ್ತು ಅನುಬಂಧಗಳು ಆಯೋಗದ ಅಂತರ್ಜಾಲ ತಾಣ: www.karnataka.gov.in/kerc ರಲ್ಲಿ ಲಭ್ಯವಿದೆ.

ಆಯೋಗವು ಈ ವಿಷಯದಲ್ಲಿ ಸಾರ್ವಜನಿಕರಿಂದ ಅಭಿಪ್ರಾಯಗಳನ್ನು ಪಡೆಯಲು **ದಿನಾಂಕ: 01.02.2017ರಂದು ಮಧ್ಯಾಹ್ನ 3.30 ಗಂಟೆಗೆ ಮಹಾಲಕ್ಷ್ಮೀ ಚೇಂಬರ್ಸ್, ನಂ.9/2, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001ರ** 6ನೇ ಮಹಡಿಯಲ್ಲಿರುವ ತನ್ನ ಕೋರ್ಟ್ ಹಾಲ್‌ನಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಿಗದಿಪಡಿಸಿದೆ.

ಆಸಕ್ತ ವ್ಯಕ್ತಿಗಳು ಸದರಿ ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಲಿಖಿತ / ಮೌಖಿಕ ಅಭಿಪ್ರಾಯಗಳನ್ನು ಆಯೋಗದ ಮುಂದೆ ಸಲ್ಲಿಸಬಹುದಾಗಿದೆ.

**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಆದೇಶದನುಸಾರ**

**ಕಾರ್ಯದರ್ಶಿ**

Phone: 080-25320213/214/335/339 ◆ Fax : 080-25320338 (Chairman Office) ◆ 25591412 (Secretary Office)
E-mail : kerc-ka@nic.in ◆ Website : www.karnataka.gov.in/kerc